1	2	3	4
22.	ನಗರ ಸೌಂದರ್ಯೀಕರಣ	3	4,08,024
23.	ಪುತ್ಥಳಿಗಳ ಸ್ಥಾಪನೆ	3	3,21,292
24.	ಬೀದಿ ದೀಪಗಳಿಗೆ ಬೇಕಾಗುವ ಸಲಕರಣೆ ವಿದ್ಯುತ್ ಉಪಕರಣಗಳ ಖರೀದಿ	8	10,51,244
25.	ಪಾಲಿಕೆಯ ಕಟ್ಟಡಗಳ ವಿದ್ಯುದ್ದೀಕರಣ ಸುಸ್ಥಿತಿ	7	81,115
26.	ಕೊಳವೆ ಭಾವಿ ಕೊರೆಯುವುದು	233	1,41,38,930
	ಒಟ್ಟು	**1448**	**8,09,54,212**

ಧಾರವಾಡ ಜಿಲ್ಲೆಯಲ್ಲಿ ರೈತ ಕಾಯಕ ಕೆರೆಗಳು

1867(1699) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ (ಹುಬ್ಬಳ್ಳಿ): ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಧಾರವಾಡ ಜಿಲ್ಲೆಯಲ್ಲಿ ರೈತ ಕಾಯಕ ಕೆರೆಯೆಂದು ಗುರುತಿಸಿದ ಕೆರೆಗಳೆಷ್ಟು; (ತಾಲ್ಲೂಕುವಾರು ವಿವರ ನೀಡುವುದು);

ಆ. ರೈತ ಕಾಯಕ ಕೆರೆಗಳ ಹೂಳೆತ್ತಲಿಕ್ಕೆ ಧಾರವಾಡ ಜಿಲ್ಲೆಗೆ ಬಿಡುಗಡೆ ಮಾಡಿದ ಹಣವೆಷ್ಟು;

ಇ. ಎಷ್ಟು ತಿಂಗಳಲ್ಲಿ ಕೆರೆ ಹೂಳೆತ್ತುವ ಕೆಲಸ ಪೂರ್ಣಗೊಳಿಸಲು ನಿರ್ದೇಶನ ನೀಡಿದೆ; (ವಿವರ ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ. ಒಟ್ಟು 7 ಕೆರೆಗಳನ್ನು ಗುರುತಿಸಲಾಗಿದೆ. ತಾಲ್ಲೂಕುವಾರು ಕೆರೆಗಳ ವಿವರ ಈ ಕೆಳಗಿನಂತಿದೆ:

(ಲಕ್ಷ ರೂ.ಗಳಲ್ಲಿ)

ಕ್ರ ಸಂ.	ತಾಲ್ಲೂಕು	ಕೆರೆಯ ಹೆಸರು	ಅಂದಾಜು ಮೊತ್ತ
1.	ಧಾರವಾಡ	ನವಲೂರು ಕೆರೆ	9.00
2.	ಧಾರವಾಡ	ಡೋರಿಕೆರೆ	29.90
3.	ಧಾರವಾಡ	ಬೊಕ್ಕಾಪುರ ಕೆರೆ	25.00
4.	ಹುಬ್ಬಳ್ಳಿ	ಬುಡ್ನಾಳ ಕೆರೆ	29.90
5.	ಕಲಘಟಗಿ	ಅರಳಿಕಟ್ಟೆ ಕೆರೆ	15.50
6.	ಕುಂದಗೋಳ	ಗೌಡಗೇರಿ ಕೆರೆ	27.50
7.	ಕಲಘಟಗಿ	ಸಂಗಮೇಶ್ವರ ಕೆರೆ	29.97

ಇನ್ನೂ ಹಣ ಬಿಡುಗಡೆ ಮಾಡಿರುವುದಿಲ್ಲ.

ಇ. ಜೂನ್ 2003 ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.